ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1271

ಸದಸ್ಯರ ಹೆಸರು : ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 21/09/2021

ಉತ್ತರಿಸುವವರು : ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ಶಿರಾ ನಗರಸಭೆ ವ್ಯಾಪ್ತಿಯಲ್ಲಿ ಖಾಸಗಿ ಬಡಾವಣೆಗಳು ನಿರ್ಮಾಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ	ಬಂದಿದ್ದಲ್ಲಿ ಅವುಗಳ ನಿಯಂತ್ರಣ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು;	ಜಿಲ್ಲಾಧಿಕಾರಿಗಳು ತುಮಕೂರು ರವರಿಂದ ಭೂ ಪರಿವರ್ತನೆಯಾದ ನಂತರ ಶಿರಾ ಯೋಜನಾ ಪ್ರಾಧಿಕಾರದಿಂದ ಖಾಸಗಿ ವಸತಿ ವಿನ್ಯಾಸಗಳನ್ನು ಅನುಮೋದನೆ ನೀಡಲಾಗುತ್ತಿದ್ದು ನಂತರ ನಿಯಮಾನುಸಾರ ಹೊಸ ಬಡಾವಣೆಗಳಿಗೆ ಸ್ಥಳೀಯ ಸಂಸ್ಥೆಗಳ ಆಸ್ತಿ ತೆರಿಗೆ ವಹಿಯಲ್ಲಿ ನಿವೇಶನಗಳ ವಿವರಗಳನ್ನು ದಾಖಲಿಸಲಾಗುತ್ತಿದೆ.
ಇ	ಪ್ರಸ್ತುತ ನಿರ್ಮಾಣ ಆಗಿರುವ ಬಡಾವಣೆಗಳನ್ನು ಸಕ್ರಮಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;	ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾಗಿ ಮಹಾಯೋಜನೆ ಅನುಮೋದನೆಯಾಗಿರುವ ಪ್ರದೇಶಗಳಲ್ಲಿ ದಿ: 19.10.2013ರ ಮುಂಚಿತವಾಗಿ ಬಂದಿರುವ ಎಲ್ಲಾ ತರಹದ ಅನಧಿಕೃತ ಅಭಿವೃದ್ಧಿಗಳನ್ನು ಸಕ್ರಮಗೊಳಿಸಲು ಸರ್ಕಾರವು ಅಧಿಸೂಚನೆ ಸಂಖ್ಯೆ: ನಅಇ 556 ಮೈಅಪ್ರಾ 2013(1) ದಿ:28.05.2014ರಲ್ಲಿ Karnataka Town and Country Planning (Regularisation of unauthorised Development or Constructions) Rules, 2014 ಅನ್ನು ಜಾರಿಗೆ ತಂದಿರುತ್ತದೆ. ಸದರಿ ನಿಯಮಕ್ಕೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು SLA(c) No(s).957/2017 ರಲ್ಲಿ ದಿ:13.07.2017 ರಂದು ಮಧ್ಯಂತರ ತಡೆಯಾಜ್ಞೆಯನ್ನು ಮುಂದಿನ ತೀರ್ಪಿನವರೆಗೂ ಮುಂದುವರೆಸುವಂತೆ ಆದೇಶ ನೀಡಿರುತ್ತದೆ.
ಈ	ಹಾಗಿದ್ದಲ್ಲಿ, ಪ್ರಸ್ತುತ ಯಾವ ಹಂತದಲ್ಲಿದೆ?	

ಸಂಖ್ಯೆ: ನಅಇ 206 ಜಿಇಎಲ್ 2021(ಇ)

ಎನ್. ನಾಗರಾಜು (ಎಂ.ಟಿ.ಬಿ)

ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು